ಕಲ್ಪನೆ ಕಾವ್ಯ



## ಬಿನ್ನಹ

ನನ್ನದೊಂದು ಅನಿಸಿಕೆ
ನಾನೊಂದು ಮೀನಾಗಬೇಕಿತ್ತು
ದೊಡ್ಡದೋ ಸಣ್ಣದೋ ನೀನನ್ನ
ಅಪ್ಪಿ ಹಿಡಿದರೆ ಸಾಕು
ತೇಲುತ್ತಾ ಮೇಲೆ ಕೆಳಗೆ
ಸಮುದ್ರವೇ ನಮ್ಮದೆಂಬ ಹೆಮ್ಮೆ ಬೇರೆ
ಕಾಣುತ್ತಾ ನಿನ್ನ ಜೊತೆ ಸ್ವರ್ಗ
ಸಾಕಿನ್ನು ನಿನ್ನ ಮೋಹಕ ನೋಟ
ನಿನ್ನ ಮೈಮಾಟಕೆ
ಸಾಟಿ ಇಲ್ಲ ಯಾರೂ
ನನಗೊಬ್ಬನಿಗೇ ಇರಲಿ ಎಲ್ಲವೂ
ಸಮುದ್ರದಲಿ ಈಜುತ್ತಿರುವ
ಮೀನ ಕಿನ್ನರಿ ನೀನು
ಜೊತೆಯಾಗುತ್ತೇನೆ ನಾನೂ
ಅಲ್ಲಿ ಎಚ್ಚರಿಕೆ ದೊಡ್ಡ
ತಿಮಿಂಗಿಲಗಳೇ ಇದ್ದಾವು
ನೀನು ಬೇಟೆಯಾಡುವುದು ಬೇಡ
ಕಾಯುತ್ತೇನೆ ಕಡೆತನಕ
ಪ್ರಾಣವನ್ನಾದರೂ ಕೊಟ್ಟೇನು
ಬಲೆಗಾರರೂ ಇದ್ದಾರು
ಬಲಿಯಾಗುವದು ಬೇಡ
ನೀನ್ಯಾರಿಗೋ ಏನೋ ಆಗುತ್ತದೆ
ನನಗೆ ನೀನು ಮೀನಾಕ್ಷಿಯೇ
ನನ್ನ ಕಣ್ಣ ಕನ್ನಡಿ ನೀನು
ಹೊತ್ತು ತಿರುಗುತ್ತೇನೆ ನಿನ್ನನ್ನು
ಸಮುದ್ರ ತೀರದ ಕಡೆ ಈಜಿ
ನನಗಾಗಿ ನೀನು

● ವಿ.ಕೆ. ಸಂಕನಗೌಡರ

## ಕಡಲ ಸೀಮೆಯ ಹುಡುಗಿ

ಕಡಲ ಸೀಮೆಯ ಹುಡುಗಿ
ಮತ್ಸ್ಯ ಮಡಿಲಲ್ಲಿ ಕನಸು
ತುಂಬಿ ಕಾಡಿದ್ದಾಳೆ
ಹರಿದಾಡಿದ್ದಾಳೆ ಮನಸಿನ ತುಂಬ ಕಡಲಾಗಿ!
ಹಿಂದೆ ಜ್ವಲಿಸುವ ಬೆಳಕಿಗೆ
ತಳಾತಳದ ಮುತ್ತು ಹವಳಗಳು
ಶಾಂತ, ಸ್ನಿಗ್ಧ, ನಗ್ನತೆಗೆ ಸಾಕ್ಷಿಯಾಗಿವೆ;
ಗರಿಗೆದರಿದ ಬಳ್ಳಿಗಳು ಹುಚ್ಚೆದ್ದು
ಉಕ್ಕೇರಿ ಬಿಳಿಯ ನೊರೆಯಾಗಿ
ಚುಮ್ಮುವ ಮುತ್ತುಗಳಾಗಿವೆ!
ಹಾಗೊಮ್ಮೆ
ಒಳಗೆ ಬಾ ಎಂದು ಬರಸೆಳೆಯಲು
ಚುಂಬಕ ಕಣ್ಣುಗಳಲ್ಲಿ
ಮೋಹವನ್ನೇ ತಬ್ಬಿಹಿಡಿದಿದೆ;
ಕಾಲ ಕೆಳಗಿರು ಗರಿಗಳು ಕ್ಷಣಕ್ಷಣಕ್ಕೂ
ಕೊಚ್ಚಿ ಜೋಲಿ ತಪ್ಪುತ್ತಿವೆ.
ಹೀಗೆ...
ಹೀಗೇ ಇಲ್ಲೇ
ನಿಂತಂತೆ ಇದ್ದುಬಿಡಲೇ
ಎಂದು ಅನಿಮಿಷವನ್ನು ತಬ್ಬಿ
ಹರಿವ ಹೊಳೆಯಾಗಿ ಒಳ ಸೇರಿ ಬಿಡಲು
ಈ ಕಡಲಿನ ಹುಡುಗಿ ಮೋಹಕವಾಗಿ
ಹರಿಯುತ್ತಲೇ ಇದ್ದಾಳೆ...

● ಡಾ. ನಾ. ಮುನಿರಾಜು